ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 3, November-December 2024, Pp. 51-53
©*IIMRD*, Mysuru
www.iimrd.com

# ಬಸವಣ್ಣನವರ ಒಂದು ವಚನ ಕುರಿತು ಅಧ್ಯಯನ

**ಡಾ. ಎನ್. ಮಹೇಶ್ವರಿ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಮೈಸೂರು.

**ಸಾರಾಂಶ: (Abstract)**

*ಹನ್ನೆರಡನೇ ಶತಮಾನದ ಸಮಾಜೋ–ಧಾರ್ಮಿಕ ಚಳುವಳಿಯು ಭಾಷೆಯನ್ನು ಕಲಾತ್ಮಕವಾಗಿ ಬಳಸಿಕೊಂಡು ತನ್ನ ಇರುವಿಕೆಯನ್ನ, ಅಸ್ಮಿತೆಯನ್ನ ಇಂದಿಗೂ ಸಾರುತ್ತಲೇ ಬರುತ್ತಿದೆ. ಒಳ–ಹೊರಗುಗಳ ಭಿನ್ನತೆಯನ್ನು (ಅಂತರಂಗ–ಬಹಿರಂಗ) ತೊಡೆದು, ಏಕವಾಗಿಸುವ ಶುದ್ಧ ಮನಸ್ಸಿನ ಮತ್ತು ನಡೆ–ನುಡಿಗಳ ಐಕ್ಯತೆ ಇಂದಿಗೂ ಅಗತ್ಯತೆಯಿದೆ. ವ್ಯಷ್ಟಿಯಲ್ಲಿ ಪ್ರಾರಂಭವಾಗಿ ಸಮಷ್ಟಿ ಚೇತನವಾಗಿ ನಿಲ್ಲುವ ಸ್ಥಿತಿಯನ್ನು ಇದು ತಿಳಿಸುತ್ತಿದೆ.*

**ಮುಖ್ಯಪದಗಳು (Keywords):** ಕನ್ನಡ ಸಾಹಿತ್ಯ, ವಚನ ಸಾಹಿತ್ಯ, ಶರಣರ ಚಳವಳಿ.

**ಪೀಠಿಕೆ**

ಕರ್ನಾಟಕದಲ್ಲಿ ಬೌದ್ಧ, ಜೈನ, ವೈಧಿಕ ಧರ್ಮಗಳಲ್ಲಿನ ಕೆಲವು ಅಂಶಗಳನ್ನ ದಿಕ್ಕರಿಸಿ, **'ಪರ'** ದಂತೆಯೇ **'ಇಹ'** ವೂ ಮುಖ್ಯವೆಂಬ ಮಾತಿನಲ್ಲಿಯೇ ತನ್ನ ಶ್ರೇಷ್ಠತೆಯನ್ನು ಸಾರಿದ ಕಾಲ ಹನ್ನೆರಡನೆಯ ಶತಮಾನ. ಬೌದ್ಧ ಧರ್ಮ ನಿರೀಶ್ವರವಾದಿಯಾಗಿದ್ದು, ಜೈನ ಧರ್ಮ ಆತ್ಮವಾದಿಯಾಗಿದ್ದು, **ಆತ್ಮ – ದೈವ**ಗಳೆರಡನ್ನೂ ಇಚ್ಛೆಗನುಸಾರ ಬಳಸಿದ ವೈಧಿಕ ಧರ್ಮವನ್ನ ತ್ಯಜಿಸುತ್ತಲೇ, ತನ್ನ ವಿಭಿನ್ನ ತಾತ್ವಿಕ, ಕ್ರಿಯೆ – ಆಚರಣೆಗಳ ಉದ್ದೇಶವನ್ನು ವ್ಯಕ್ತಿಯ ಹಂತದಿಂದ ಪ್ರಾರಂಭವಾಗಿ ಸಮಷ್ಟಿಯಲ್ಲಿ ಲೀನವಾಗುವುದನ್ನ ತಿಳಿಸಿದ್ದು ವಚನಕಾರರು.

ವಚನವೆಂದರೆ ಮಾತು ಹೇಗೋ–ಹಾಗೆ ಭಾಷೆಯನ್ನ ಕೊಡುವುದು ಎಂದೂ ಅರ್ಥ ಇದೆ. ಭಾಷೆ ಕೊಟ್ಟಂತೆ ನಡೆದವರ ನಡೆಯೇ ವಚನ ಚಳುವಳಿ. ವಚನಕಾರರು ನುಡಿದಂತೆ ನಡೆದರು, ನಡೆದದ್ದನ್ನೇ ನುಡಿದರು ಎಂಬುದು ಸತ್ಯವಾದ ಮಾತೆ ಆಗಿದೆ. ಸಾವು ಮನುಷ್ಯನ ಬದುಕಿನಷ್ಟೇ ಸಹಜ ಸ್ಥಿತಿ. ದೇಹದ ನಶ್ವರತೆಯನ್ನ ಎಲ್ಲಾ ಧರ್ಮವೂ ಹೇಳುತ್ತಲೇ ಬಂದಿದೆ. ಆದರೆ ಸಾವನ್ನೂ "ಮರಣವೇ ಮಹಾನವಮಿ ಹೋಗಾ" ಎಂದು ಬದುಕಿನಷ್ಟೇ ಸಾವನ್ನೂ ಸಹಜವಾಗಿ ತೆಗೆದುಕೊಂಡ ಸ್ಥಿತಿ ವಚನಕಾರರದು. ಬಸವಣ್ಣನವರ ಅಂತಹ ಒಂದು ವಚನ ಸಾವಿನ ಬಗೆಗೆ, ಭಕ್ತಿಯ ಬಗೆಗೆ ತುಂಬಾ ಚೆನ್ನಾಗಿ ಕಣ್ಣಿಗೆ ಕಟ್ಟುವ ಚಿತ್ರಣವನ್ನು ಕೊಡುತ್ತಲೇ ತನ್ನ ವಿಶೇಷ ಅಂಶಗಳಿಂದ ಇಂದಿಗೂ ಜನಸಮುದಾಯದಲ್ಲಿ ಉಳಿದಿದೆ.

*Please cite this article as:* ಮಹೇಶ್ವರಿ, ಎನ್. (2024). ಬಸವಣ್ಣನವರ ಒಂದು ವಚನ ಕುರಿತು ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(3). ಪು.ಸಂ.* 51–53

***ನೆರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ ಮುನ್ನ***
***ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆಗಾಗದ ಮುನ್ನ***
***ಕಾಲ ಮೇಲೆ ಕೈಯನೂಚಿ ಕೋಲ ಹಿಡಿಯದ ಮುನ್ನ***
***ಮುಪ್ಪಿನಿಂದೊಪ್ಪವಳಿಯದ ಮುನ್ನ ಮೃತ್ಯು ಮುಟ್ಟದ ಮುನ್ನ***
***ಪೂಜಿಸು ಕೂಡಲಸಂಗಮದೇವನ.***

ಪ್ರಖ್ಯಾತವಾದ ಈ ವಚನವು ಬಸವಣ್ಣನವರ ಒಟ್ಟೂ ಆಶಯವನ್ನು ಮತ್ತೆ ಏಕಕಾಲದಲ್ಲಿ ಸಮಕಾಲೀನ ವೈಧಿಕ ಧರ್ಮದಲ್ಲಿನ ನಂಬಿಕೆಯನ್ನು ಒಡೆದು ಮತ್ತೊಂದನ್ನು ಕಟ್ಟುವ ಅತ್ಯದ್ಭುತವಾದ ಸ್ಥಿತಿಯಾಗಿದೆ. ಈ ವಚನದ ಮೂರು ಸಾಲುಗಳು ಮಧ್ಯವಯಸ್ಕನೊಬ್ಬನ ಸ್ಥಿತಿಯಿಂದ ಮುಪ್ಪಿನವರೆಗಿನ ಚಲನೆಯನ್ನ ಹೇಳುತ್ತದೆ. ನೆರೆ ಕೆನ್ನೆಗೆ, ಚರ್ಮಕ್ಕೆ, ಗಲ್ಲಕೆ ಬರುವುದು, ಶರೀರದಲ್ಲಿನ ಎಲುಬಿನ ಗೂಡು ಕಾಣುವುದು (ಗೂಡು ಅನ್ನುವುದೂ ಇಲ್ಲಿ ಶ್ಲೇಷೆಯಲ್ಲಿ ಬಳಕೆಯಾಗುತ್ತಿದೆ), ಹಲ್ಲು ಬೀಳುವುದು, ಬೆನ್ನು ಬಾಗುವುದು, ಸಹಜವಾಗಿ ಮನುಷ್ಯ ತನ್ನ ದೇಹದ ಶಕ್ತಿಯನ್ನ ಕಳೆದುಕೊಂಡು ಮತ್ತೊಬ್ಬರನ್ನು ಆಶ್ರಯಿಸುವ ಚಿತ್ರ, ಆ ಸಮಯದಲ್ಲೂ ಕಾಲ ಮೇಲೆ ಕೈ ಊರಿ– ಕೋಲನ್ನು ಹಿಡಿವ ಸ್ವಾಭಿಮಾನದ ಚಿತ್ರಣ ಬಂದರೂ ಅದು ಕ್ಷಣಿಕ. ಮುಪ್ಪು ಆವರಿಸಿ ಸಾವಿಗೆ ಹತ್ತಿರ ಹತ್ತಿರವಾಗುವ ಮನುಜನ ಸ್ಥಿತಿಯನ್ನು ಹೀಗೆಲ್ಲಾ ಆಗುತ್ತದೆಂದು ಶಬ್ದದ ಮೂಲಕವೇ ವಾಸ್ತವ ಚಿತ್ರಣವನ್ನ ಕಟ್ಟಿಕೊಡುತ್ತಲೇ ಮತ್ತೊಂದು ಪ್ರಶ್ನೆಯನ್ನು ಎತ್ತುತ್ತದೆ. ಅದು ದೈವ ಸಾಕ್ಷಾತ್ಕಾರದ ಬಗೆಗಿನ ಆಚರಣೆ. ಇದು ವೈಧಿಕರಲ್ಲಿ ವಯಸ್ಸಾದ ನಂತರ ಕಾಶೀ – ರಾಮೇಶ್ವರದ ಚಿಂತನೆ ಬಂದರೆ, ಬಸವಣ್ಣನವರು ಒಂದೇ ಒಂದು ಪದವನ್ನು ಪ್ರತಿ ಸಾಲಿನಲ್ಲಿ "ಮುನ್ನ" ಅನ್ನುವುದನ್ನು ತಂದು ಅಷ್ಟೂ ಕಲ್ಪನೆಗಳನ್ನು ತಳ್ಳಿ ಹಾಕುತ್ತಲೇ, ಅತ್ಯಂತ ಜಾಗರೂಕವಾಗಿ ಒತ್ತಿ ಹೇಳುತ್ತಲೇ ವಯಸ್ಸಿನಲ್ಲಿರುವಾಗಲೇ ದೈವದ ಬಗೆಗಿನ ಧ್ಯಾನ – ಆಚರಣೆಗಳು ಮುಖ್ಯವೆಂದು ಹೇಳುವ ಅತ್ಯದ್ಭುತ ಚಿತ್ರಣ ಈ ವಚನದ್ದಾಗಿದೆ. ವಿದ್ಯಾಶಂಕರರು ಈ "ಮುನ್ನ" ಅನ್ನುವುದನ್ನು – ಸಾವಿನ ಎಚ್ಚರಿಕೆ ಗಂಟೆಯೆಂದು ಹೇಳುವುದು ಸಹಜವಾಗಿದೆ. ಅದರೆ ಅದಕ್ಕಿಂತ ಮುಖ್ಯವಾಗಿ ಬಸವಣ್ಣನವರು ವಯಸ್ಸನ್ನೂ, ವಯಸ್ಸಿನಿಂದ ದೇಹದಲ್ಲಿ ಆಗುವ ಬದಲಾವಣೆಗಳನ್ನು ಸಚಿತ್ರವಾಗಿ ಮಾತಿನಲ್ಲೇ ಹೇಳುತ್ತಲೇ, ಪ್ರಸ್ತುತ ವಚನ ರಚನಾ ಸಮಯದಲ್ಲಿ ಅವರ ವಯಸ್ಸನ್ನು ಅರಿಯಲೂ ಈ ಮುನ್ನ ಅನ್ನುವುದು ಸಹಾಯಕ್ಕೆ ಬರುತ್ತದೆ .

ವಚನವು ನೆರೆ ಕೆನ್ನೆಗೆ ಅನ್ನುವ ಪದದ ಮೂಲಕ ಪ್ರಾರಂಭವಾಗಿರುವುದಾದರೂ, ನೆರೆ ಮನುಷ್ಯನಿಗೆ ಮಧ್ಯಮ ವಯಸ್ಸಿನಲ್ಲಿ ಆಗುವುದಾಗಿದೆ, ತೆರೆ – ಗೂಡು ಹೋಗುವುದು – ಹಲ್ಲು ಹೋಗುವುದು – ಬೆನ್ನು ಬಾಗುವುದು – ಅನ್ಯರಿಗೆ ಹಂಗಾಗುವುದು – ಕಾಲ ಮೇಲೆ ಕೈ ಊರಿ, ಕೋಲ ಹಿಡಿಯುವುದು ಇವೆಲ್ಲವೂ ಮಧ್ಯಮ ವಯಸ್ಸನ್ನು ದಾಟಿದ ನಂತರವೇ ಆಗುವುದು. ಅಂದಾಜು ಮೂವತ್ತು ವರ್ಷದ ನಂತರ ಅಂದರೂ ತಪ್ಪಿಲ್ಲ. ಹಾಗಾದರೆ ಈ ವಚನ ರಚನೆಯ ಕಾಲದಲ್ಲಿ ಬಸವಣ್ಣನವರ ವಯಸ್ಸು 30 ರಿಂದ 40 ರ ಒಳಗೆ ಇದ್ದಿರಬಹುದೆಂಬುದನ್ನೂ ಕಲ್ಪನೆ ಮಾಡಿಕೊಳ್ಳುವ ಸಾಧ್ಯತೆ ವಚನದಿಂದಲೇ ಸಾಧ್ಯವಿದೆ.

ಇನ್ನು 'ಮುಪ್ಪಿನಿಂದೊಪ್ಪವಳಿಯದ ಮುನ್ನ' ಎಂಬ ವಾಕ್ಯವನ್ನು ಎರಡು ರೀತಿಯಲ್ಲಿ ಅರ್ಥೈಸಲು ಸಾಧ್ಯವಿದೆ. ಒಂದು– ಮುಪ್ಪಿನ ದೇಹ ಅಷ್ಟೇನು ಶಕ್ತವಾಗಿರುವುದಿಲ್ಲ. ನೋಡಲೂ ಅಂದವಾಗಿರುವುದಿಲ್ಲ. (ಸುಂದರವಿಲ್ಲ ಅನ್ನುವ ಅರ್ಥವನ್ನು ಹೇಳಲು ಬಸವಣ್ಣನವರು 'ಒಪ್ಪವಿಲ್ಲ' ಎಂಬ ಆಡುಮಾತನ್ನೇ ಕಾವ್ಯ ಭಾಷೆಯಾಗಿ ಬಳಸಿಕೊಂಡಿರುವುದನ್ನು ಗಮನಿಸಬಹುದು) ಎಂದು, ಮತ್ತೊಂದು – 'ಮುಪ್ಪಿನಿಂ ದೊಪ್ಪವಳಿಯದ ಮುನ್ನ' ಅನ್ನುವ ಪದವು ದೊಪ್ಪನೆಂದು ಬೀಳುವ ಶರೀರದ ಸ್ಥಿತಿಯನ್ನು ಅನುಕರಿಸಲು ಸಶಕ್ತವಾಗಿ ಬಳಸಿರುವ ಪದವೇ ಅಗಿದೆ. ಮತ್ತೆ ಪರಿಣಾಮಕಾರಿಯಾಗಿರುವುದೂ ಹೌದು .

ಭಾಷೆಯನ್ನು ಅರಿತವರು ಮಾತ್ರವೇ ಸಶಕ್ತವಾಗಿ ಹೀಗೆ ಭಾಷೆಯ ಮುಖಾಂತರವೇ ಎಲ್ಲವನ್ನ ಕಟ್ಟುವ, ಎಲ್ಲವನ್ನೂ, ಸೂಕ್ಷ್ಮವಾಗಿ ನೋಡಿ ಮುಂದೆ ಆಗುವುದನ್ನು – ಆಚರಣೆಗೆ ತರುವುದನ್ನು ಮನಸ್ಸಿಗೆ ನಾಟುವಂತೆ ಆಡಬಲ್ಲರೆಂಬುದಕ್ಕೆ ಬಹುದೊಡ್ಡ ಸಾಕ್ಷಿ

**ಆಕರ ಗ್ರಂಥ :**


- ಬಸವರಾಜು, ಎಲ್. (2016). *ಬಸವಣ್ಣನವರ ವಚನಗಳು. ಸಪ್ನ ಬುಕ್ ಹೌಸ್.*